ಮೂಲ ದಾವಾ ನಂ.44/2020

ಪಿ.ಡಬ್ಲ್ಯೂ-1

ದಿನಾಂಕ 10-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ ಐ.ಜೆ.ಎಫ್ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು , ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿದ್ದು , ಅದನ್ನು ಓದಿ ತಿಳಿದುಕೊಂಡ ನಂತರ ಸಹಿ ಮಾಡಿರುತ್ತೇನೆ.

ದಾವಾಸ್ತಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-1 ಎಂದು , ಭೂಮಾಪನಾ ಶಾಖೆ, ಶಿರಸಿ ರವರು ನೀಡಿದ ದಾವಾಸ್ತಿಯ ನಕಾಶೆಯನ್ನು ಹಾಜರುಪಡಿಸಿದ್ದು ಅದನ್ನು ನಿ .ಪಿ-2 ಎಂದು , ಭೂದಾಖಲೆಗಳ ಸಹಾಯಕ ನಿರ್ದೇಶಕರು,ಶಿರಸಿರವರು ನೀಡಿದ ದಾವಾಸ್ತಿಯ ನಕ್ಷೆಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ-3 ಎಂದು, ವಾದಿಯವರು ಸದಾಶಿವಳ್ಳಿ ಪಂಚಾಯತ , ತಾರಗೋಡ ಇವರು ನೀಡಿದ ಆಕ್ಷೇಪಣಾ ಪತ್ರವನ್ನು ಹಾಜುರಪಡಿಸಿದ್ದು ಅದನ್ನು ನಿ.ಪಿ-4 ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು , ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಲಾಯಿತು.)

ಓ.ಹೆ.ಕೆ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಶಿರಸಿ.